# ತೆಂಗಿನಲ್ಲಿ ಸಮಗ್ರ ಬೆಳೆ ನಿರ್ವಹಣೆ

ತೆಂಗು ಒಂದು ಮುಖ್ಯವಾದ ತೋಟಗಾರಿಕೆ ಬೆಳೆಯಾಗಿದ್ದು ಇತ್ತೀಚಿನ ದಿನಗಳಲ್ಲಿ ಇದರ ಉತ್ಪಾದನೆ ಹಾಗೂ ಗುಣಮಟ್ಟ ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಆಗಿರುವುದು ಕಂಡು ಬಂದಿದೆ ಇದಕ್ಕೆ ಪ್ರಮುಖ ಕಾರಣವೆಂದರೆ ಆಧುನಿಕ ಕೃಷಿಯಲ್ಲಿ ತೆಂಗಿನಲ್ಲಿ ನಿರಂತರ ಹೆಚ್ಚು ಪೋಷಕಾಂಶಗಳನ್ನು ಹೀರಿಕೊಳ್ಳುವ ಬೆಳೆಗಳಾದ ಅರಿಶಿಣ ಮತ್ತು ಶುಂಠಿಯನ್ನು ಅಂತರ ಬೆಳೆಯಾಗಿ ರೈತರು ಬೆಳೆಯುತ್ತಿರುವುದು, ಬೆಳೆಗೆ ಬೇಕಾದ ಶಿಫಾರಸು ಮಾಡಿದ ಪ್ರಮಾಣವನ್ನು ಒದಗಿಸದಿರುವುದು, ಕಾಂಪೋಸ್ಟ್ ಗೊಬ್ಬರ ಬಳಸದಿರುವುದು, ಹಸಿರೆಲೆಗೊಬ್ಬರ ಮತ್ತು ದ್ವಿದಳಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯದೇ ಇರುವುದು, ಲಘು ಪೋಷಕಾಂಶಗಳ ಕೊರತೆ ಮತ್ತು ತೆಂಗಿನ ಮರದ ಸುತ್ತ ನಿರಂತರ ಬೇಸಾಯ ಕ್ರಮಗಳಿಂದ ಬೇರುಗಳಿಗೆ ಗಾಯಮಾಡುವುದರಿಂದ ತೆಂಗಿನಲ್ಲಿ ಇಳುವರಿ ಗಣನೀಯವಾಗಿ ಕಡಿಮೆ ಆಗುವುದಕ್ಕೆ ಕಾರಣವಾಗಿದೆ. ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರವೆಂದರೆ ತೆಂಗಿನಲ್ಲಿ ಅಧಿಕ ಮತ್ತು ಗುಣಮಟ್ಟದ ಇಳುವರಿಗೆ ಸಮಗ್ರ ಪೋಷಕಾಂಶಗಳ ನಿರ್ವಹಣೆಯನ್ನು ಅನುಸರಿಸುವುದರ ಸೂಕ್ತವೆಂದು ತಿಳಿದು ಬಂದಿದೆ.

**ಮಣ್ಣು:** ನೀರು ಬಸಿದು ಹೋಗುವ ಕೆಂಪುಗೋಡು/ಮೆಕ್ಕಲು ಮಣ್ಣು/ಕಪ್ಪು ಮಣ್ಣುಗಳಲ್ಲಿ ಬೆಳೆಯಬಹುದು. ಕೆಂಪು ಮಣ್ಣು ಹೆಚ್ಚು ಸೂಕ್ತ. ಸಾಕಷ್ಟು ಸಾವಯವ ಅಂಶವುಳ್ಳ ಫಲವತ್ತಾದ 6.5 ರಿಂದ 7.0 ರಸಸಾರವುಳ್ಳ ಮಣ್ಣು ಬೇಸಾಯಕ್ಕೆ ಅವಶ್ಯಕ.

**ಕಾಲ: ತೆಂಗಿನ** ಬೆಳೆಯನ್ನು ನಾಟಿ ಜೂನ್-ಜುಲೈ ಸೂಕ್ತ.

**ಸಾವಯವಗೊಬ್ಬರಗಳು :** ಪ್ರತಿ ಗಿಡಕ್ಕೆ ಮತ್ತು ಪ್ರತಿ ವರ್ಷಕ್ಕೆ 30 ರಿಂದ 50 ಕಿ ಗ್ರಾ ಕೊಟ್ಟಿಗೆ ಗೊಬ್ಬರವನ್ನು ಕೊಡಬೇಕು

**ಹಸಿರೆಲೆ ಗೊಬ್ಬರ :** ಗೊಬ್ಬರವಾಗಿ ಸೆಣಬು, ಅಲಸಂದೆ,ಹುರುಳಿ, ಅಥವಾ ಅಪ್ಸೆಣಬನ್ನು ಗಿಡದ ಸುತ್ತಬೆಳೆದು ಹೂವಾಗುವ ಮೊದಲು ಮಣ್ಣಿಗೆ ಸೇರಿಸಬೇಕು..ಈ ಬೆಳೆಗಳನ್ನು ಮುಂಗಾರಿನಲ್ಲಿ ಅಂದರೆ ಏಪ್ರಿಲ್ –ಮೇ ತಿಂಗಳಲ್ಲಿ ಬೆಳೆಯುವುದು ಸೂಕ್ತ. ಈ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿನಲ್ಲಿ ಸಾರಜನಕದ ಸ್ಥಿರೀಕರಣಗೊಂಡು ಸುಮಾರು ಶೇಖಡ 25 ರಿಂದ 30ಕಿಗ್ರಾಂ ನಷ್ಟು ಸಾರಜನಕ ಒದಗಿಸಿದಂತಾಗುತ್ತದೆ.

**ಬೇವಿನ ಹಿಂಡಿ ಬಳಕೆ:** ಪ್ರತಿ ಗಿಡಕ್ಕೆ 1-2 ಕಿಗ್ರಾಂ ಬೇವಿನ ಹಿಂಡಿಯನ್ನು ಕೊಡುವುದರಿಂದ ಕೀಟ ಮತ್ತು ರೋಗ ಭಾದೆಯನ್ನು ತಡೆಯಬಹುದು.

**ಜೈವಿಕಗೊಬ್ಬರಗಳು :** ಪ್ರತಿ ಗಿಡಕ್ಕೆ 50 ಗ್ರಾಂ ಟ್ರೈಕೋಡೆರ್ಮಾ, 50 ಗ್ರಾಂ ಮೈಕೊರೈಝ ಮತ್ತು 50 ಗ್ರಾಂ ರಂಜಕ ಕರಗಿಸುವ ಸೂಕ್ಷ್ಮಾಣು ಜೀವಿಗಳನ್ನು ಕೊಟ್ಟಿಗೆ ಗೊಬ್ಬರದೊಂದಿಗೆ ಬೆರಸಿ ಗಿಡದ ಸುತ್ತ ಹಾಕಿ ಮಣ್ಣು ಮುಚ್ಚಬೇಕು

**ರಾಸಾಯನಿಕ ಗೊಬ್ಬರಗಳು : ಮೊದಲನೇ ವರ್ಷದಲ್ಲಿ:**

**4 ವರ್ಷದ ನಂತರದ ಮರಗಳಿಗೆ ಪ್ರತಿ ಗಿಡಕ್ಕೆ ಮುಂಗಾರಿನಲ್ಲಿ (ಜೂನ್-ಜುಲೈ)**

ಸಾರಜನಕ 170 ಗ್ರಾಂ (ಯೂರಿಯಾ 370 ಗ್ರಾಂ), ರಂಜಕ 120 ಗ್ರಾಂ (ಎಸ್.ಎಸ್.ಪಿ-750 ಗ್ರಾಂ) ಮತ್ತು ಪೊಟ್ಯಾಷ್ 400 ಗ್ರಾಂ (ಮ್ಯೂರೇಟ್ ಆಫ್ ಪೊಟ್ಯಾಷ್ 664 ಗ್ರಾಂ) ಪೋಷಕಾಂಶಗಳನ್ನು ಪ್ರತಿ ಮರದ ಐದು ಅಡಿಗಳ ಸುತ್ತಳತೆಯಲ್ಲಿ ಅರ್ಧ ಅಡಿ ಆಳ ತೆಗೆದು ಗೊಬ್ಬರಗಳನ್ನು ಹಾಕಿ ಮಣ್ಣು ಮುಚ್ಚಬೇಕು. ಮುಖ್ಯ ಪೋಷಕಾಂಶಗಳ ಜೊತೆಗೆ ದ್ವಿತೀಯ ಮತ್ತು ಲಘು ಪೋಷಕಾಂಶಗಳಾದ 1.0 ಕಿಗ್ರಾಂ ಜಿಪ್ಸಂ, 500 ಗ್ರಾಂ ಮೆಗ್ನೀಷಿಯಂ ಸಲ್ಫೇಟ್,150 ಗ್ರಾಂ ಸತುವಿನ ಸಲ್ಫೇಟ್ ಮತ್ತು 50 ಗ್ರಾಂ ಬೋರಾಕ್ಸ್‌ನ್ನು ಕಾಂಪೋಸ್ಟ್ ಗೊಬ್ಬರದೊಂದಿಗೆ ಬೆರಸಿ ಮಣ್ಣಿಗೆ ಹಾಕಿ ಮುಚ್ಚಬೇಕು.

**ಹಿಂಗಾರಿನಲ್ಲಿ (ಅಕ್ಟೋಬರ್-ನವೆಂಬರ್) :** 330 ಗ್ರಾ ಸಾರಜನಕ (712 ಗ್ರಾಂ ), 200ಗ್ರಾಂ ರಂಜಕ (432 ಗ್ರಾಂ) ಮತ್ತು 800 ಗ್ರಾಂ ಪೊಟ್ಯಾಷ್ 1320 ಗ್ರಾಂ)ಗೊಬ್ಬರಗಳನ್ನು ಕೊಡಬೇಕು.

**ನೀರಾವರಿ ಮತ್ತು ಅಂತರ ಬೇಸಾಯ :** ಮಣ್ಣು ಮತ್ತು ಹವಾಗುಣಕ್ಕನುಗುಣವಾಗಿ 5 ರಿಂದ 10 ದಿನಕ್ಕೊಮ್ಮೆ ನೀರು ಹಾಯಿಸಬೇಕು. ಹನಿ ನೀರಾವರಿ ಪದ್ಧತಿಯಲ್ಲಿ ಇಳುವರಿ ಕೊಡುವ ಮರಗಳಿಗೆ ದಿನಕ್ಕೆ 40 ರಿಂದ 50 ಲೀಟರ್ ನೀರು ಒದಗಿಸುವುದು ಉತ್ತಮ.ಗಿಡದ ಸುತ್ತಲೂ 1.5 ರಿಂದ 2 ಮೀಟರ್ ಸುತ್ತಳತೆಯಪಾತಿಗಳನ್ನು ಮಾಡಿ ಪಾತಿಯಲ್ಲಿ ಗೊಬ್ಬರ ಮತ್ತು ನೀರು ಕೊಡುವುದು ಒಳ್ಳೆಯದು.ವರ್ಷದಲ್ಲಿ ಎರಡು ಬಾರಿ ಗಿಡಗಳ ಸಾಲುಗಳ ನಡುವೆ ಮಾಡಬೇಕು. ಅಂತರಬೆಳೆ ಕೃಷಿಯಲ್ಲಿ ಸಿಂಚನ ನೀರಾವರಿ ಪದ್ಧತಿ ಬಳಕೆ ಸೂಕ್ತ.

**ತೆಂಗನ್ನು ಕಾಡುವ ಕೀಟಗಳು**

ತೆಂಗನ್ನು ಕಾಡುವ ಕೀಟಪೀಡೆಗಳಲ್ಲಿ ರೈನಾಸೆರಸ್ ದುಂಬಿ,ಕೆಂಪು ಮೂತಿ ಹುಳು,ಗೊಣ್ಣೆ ಹುಳು,ಕಪ್ಪು ತಲೆಹುಳು,ನುಶಿ ಬಾದೆ ಮೂದಲಾದವು

**ರೈನಾಸರಸ್ ದುಂಬಿ:** ರೈನಾಸರಸ್ ದುಂಬಿಯು ತಿಪ್ಪೆಗೊಬ್ಬರದಲ್ಲಿ ಉತ್ಪತ್ತಿಯಾಗುತ್ತದೆ ಮರಿಗಳು ಕರಗಿದ ತಿಪ್ಪೆಗೊಬ್ಬರ ತಿಂದು ಬದುಕುತ್ತವೆ. ಕೋಶಾವಸ್ಥೆಯನ್ನು ತಿಪ್ಪೆಗೊಬ್ಬರದಲ್ಲಿಯೂ ಪೂರೈಸುತ್ತದೆ. ಪ್ರೌಡಕೀಟವು ಹೊರಬಂದು ಬಾಧೆಯನ್ನು ಉಂಟುಮಾಡುತ್ತದೆ

**ಹಾನಿಯ ಲಕ್ಷಣ** ಪ್ರೌಡಕೀಟವು 3 ರಿಂದ 6 ವರ್ಷದ ತೆಂಗಿನ ಗಿಡಗಳಿಗೆ ಮುತ್ತಿಗೆ ಹಾಕಿ ಹಾನಿ ಮುಖ್ಯವಾಗಿ ಮೃದುವಾದ ಲಿಂಗ ಭಾಗವನ್ನು ಕೊರೆಯುತ್ತವೆ. ಬಾಧೆಗೊಳಗಾದ ಕಾಂಡ/ಸುಳಿ ಕೊರೆದ ಭಾಗದಲ್ಲಿ ಹಸಿ ಪುಡಿ ಉದುರುವಿಕೆ, ಗರಿಗಳು ಕತ್ತರಿಸಿದಂತೆ ಸುಳಿಯಬಾಗ ನೇತಾಡುತ್ತಿರುತ್ತದೆ. ಬಾಧೆ ಅತಿಯಾದ ಸುಳಿಯಭಾಗಕ್ಕೆ ಏಟಾಗಿ/ಹಾನಿಯಾಗಿ ಸುಳಿ ಸಾಯುತ್ತದೆ.

**ನಿಯಂತ್ರಣ ವಿಧಾನಗಳು :** ಸಾಧ್ಯವಾದಷ್ಟು ತಿಪ್ಪೆಗಳನ್ನು ತೋಟದಿಂದ ದೂರ ಮಾಡಿ. ಅಲ್ಲಲ್ಲಿ ಕಂಡುಬರುವ ಪ್ರೌಡ ದುಂಬಿಗಳನ್ನು ದೂರ ಮಾಡಿ, ತೆಂಗಿನ ತೋಟವನ್ನು ಸ್ವಚ್ಚವಾಗಿಡಿ. ಲಿಂಗಾಕರ್ಷಕ ಬಕೆಟ್ ಬಲೆಯನ್ನು ತೆಂಗಿನ ತೋಟದಿಂದ ಒಂದು ಪರ್ಲಾಂಗ್‌ನಷ್ಟು ದೂರ 5 ಅಡಿ ಎತ್ತರದಲ್ಲಿ ಕಟ್ಟಬೇಕು 2.5 ಎಕರೆಗೆ ಒಂದು ಬಕೆಟ್ ಸಾಕು. ಬಕೆಟ್‌ನಲ್ಲಿ ಕನಿಷ್ಠ 1 ಲೀ, ನೀರು ಕಾಪಾಡಿಕೊಂಡು ಅದರಲ್ಲಿ ಡಿಟರ್ಜೆಂಟ್ ಪುಡಿ ಅಥವಾ ಕಬ್ಬಿನ ಜಲ್ಲೆಯ ತುಣುಕುಗಳನ್ನು ಹಾಕಬೇಕು, ರೈತರೇ ಮಾಡಬಹುದಾದ ನಿಯಂತ್ರಣ ವಿಧಾನ ತಿಪ್ಪೆಯಲ್ಲಿ ರೋಗ ಬಂದಿರುವ ಮರಿಹುಳುಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ 50 ಮಿ.ಲಿ ಶುದ್ದ ನೀರಿಗೆ ಇವುಗಳನ್ನು ಹಾಕಿ ನಂತರ 10 ಗ್ರಾಂ ಸಕ್ಕರೆ ಬೆರಸಿ ಚೆನ್ನಾಗಿ ರುಬ್ಬಬೇಕು. ನಂತರ 50 ಮಿಲಿ ನೀರನ್ನು ಮಿಶ್ರ ಮಾಡಿ 100 ಮಿಲಿ ಮಾಡಿಕೊಳ್ಳಿ ಈ ದ್ರಾವಣದಲ್ಲಿ ರೈನೋಸಿರಸ್ ದುಂಬಿಗಳು ಅರ್ಧ ಗಂಟೆ ಈಜಾಡಲು ಬಿಡಿ. ನಂತರ ಮರದ ಹೊಟ್ಟಿರುವ ಡಬ್ಬದಲ್ಲಿ ಪ್ರೌಡ ಕೀಟಗಳನ್ನು ಬಿಟ್ಟು ನಂತರ ಸಂಜೆಯ ವೇಳೆ ಈ ದುಂಬಿಗಳನ್ನು ತಿಪ್ಪೆಗೆ ಬಿಡಿ. ಇದರಿಂದ ಇತರ ಪ್ರೌಡ ದುಂಬಿಗಳಿಗೂ ರೋಗ ಹರಡುವುದರಿಂದ ಈ ಕೀಟದ ಸಂತತಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು. ತಿಪ್ಪೆಗುಂಡಿಯ ಮೇಲೆ ಗ್ರೀನ್ ಮಸ್ಕಾರ್ಡೈನ್ ಶಿಲೀಂದ್ರ ಮೆಟರೈಸಿಯಂ ಅನಿಸೋಪ್ಲಿಯೆ ಈ ಶಿಲೀಂದ್ರವು ರೈನೋಸಿರಸ್ ದುಂಬಿಯ ಮರಿಹುಳುಗಳೂ ಹಾಗು ಪ್ರೌಡ ಕೀಟಗಳನ್ನು ರೋಗಗ್ರಸ್ಥವನ್ನಾಗಿ ಮಾಡಿ ನಾಶ ಪಡಿಸುತ್ತವೆ. (250 ಮಿ.ಲೀ ಶಿಲೀಂದ್ರದ ದ್ರಾವಣ + 750 ಮಿ.ಲೀ. ನೀರು) ಜಮೀನಿನಲ್ಲಿ ಆಗಾಗ್ಗೆ ಬೇವಿನ ಹಿಂಡಿಯನ್ನು ಬಳಸಬೇಕು. ಎಲೆಯ ಸುಳಿಯ ಪಕ್ಕೆಗಳಿಗೆ ಕೀಟನಾಶಕ + ಮರಳನ್ನು ಮಿಶ್ರ ಮಾಡಿ ತುಂಬಬೇಕು. (ಕಾರ್ಬೋಫ್ಯೂರಾನ್3ಜಿ ಹರಳು) ಪ್ರೌಢಕೀಟಗಳನ್ನು ಹಿಡಿದು ನಾಶ ಮಾಡಿ. ಸೆವಿಡಾಲ್ 8ಜಿ 25 ಗ್ರಾಂ +

ನುಣುಪಾದ 200 ಗ್ರಾಂ ಮರಳನ್ನು ಏಪ್ರಿಲ್,ಸೆಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಸುಳಿಯ 3 ಪದರಗಳಿಗೆ ತುಂಬಿರಿ. ನ್ಯಾಪ್ತಲಿನ್ ಬಾಲುಗಳನ್ನು 45 ದಿನಗಳ ಅಂತರದಲ್ಲಿ ತೆಂಗಿನ ಗಿಡಗಳಿಗೆ ಪಕ್ಕೆಗಳಲ್ಲಿ ಇಡಬೇಕು. ಕಾರ್ಬರಿನ್ 50ಡಬ್ಲಿಯೂ.ಪಿ.ಯನ್ನು ತಿಪ್ಪೆಗುಂಡಿಯ ಮೇಲೆ ಸಿಂಪಡಿಸಿ. 1 ಕೆ ಜಿ ಹರಳಿನ ಹಿಂಡಿಯನ್ನು 5 ಲೀ ನೀರಿನಲ್ಲಿ ಸಣ್ಣ ಮಡಕೆಯಲ್ಲಿ ಕಲಸಿ ಇಟ್ಟರೆ ಪ್ರೌಢ ಕೀಟಗಳು ಆಕರ್ಷಿತಗೊಂಡು ಆ ದ್ರಾವಣದಲ್ಲಿ ಬಿದ್ದು ಸಾಯುತ್ತವೆ. ಆಗ ತಾನೆ ಇಳಿಸಿದ ನೀರಾ(ಸೇಂದಿ) ದಲ್ಲಿ ತೆಂಗಿನ ಕಾಂಡದ ತುಣುಕು ಮತ್ತು ಗರಿಯ ಪುಡಿಯನ್ನು ಕತ್ತರಿಸಿ ತಯಾರಾದ ದ್ರಾವಣಕ್ಕೆ ಪ್ರೌಢ ಕೀಟಗಳು ಆಕರ್ಷಣೆಗೊಂಡು ಆ ದ್ರಾವಣದಲ್ಲಿ ಬಿದ್ದು ಸಾಯುತ್ತವೆ. ಮುಂಗಾರಿನ ಮೊದಲ ಮಳೆ ಬಿದ್ದಾಗ ಸಂಜೆಯ ವೇಳೆ ದೀಪದ ಬೆಳಕನ್ನು ಇಟ್ಟು ಪ್ರೌಢ ಕೀಟಗಳನ್ನು ಹಿಡಿದು ನಾಶ ಪಡಿಸಬೇಕು. ಪ್ರತಿ ಗಿಡಕ್ಕೆ 75 ಗ್ರಾಂ ಬೇವಿನ ಬೀಜದ ಪುಡಿ + 150 ಗ್ರಾಂ ಮರಳಿನ ಪುಡಿ ಮಿಶ್ರ ಮಾಡಿ ಸುಳಿಗರಿಯ ಸುತ್ತಲು ತುಂಬಬೇಕು.

**ಕೆಂಪು ಮೂತಿ ಹುಳು:** ಈ ಹುಳುವು ತೆಂಗು, ಖರ್ಜೂರ, ತಾಳೆ, ರಾಯಲ್ ಪಾಮ್, ಸ್ಯಾಗೋ, ಈಚಲ ಮರ, ಅಡಿಕೆ ಇತ್ಯಾದಿ ಮರಗಳಿಗೆ ಹಾನಿಯನ್ನುಂಟುಮಾಡುತ್ತದೆ.

**ಬಾಧೆಯ ಲಕ್ಷಣ:** ಪ್ರೌ ಢ ಕೀಟವು ಕಾಂಡಭಾಗದಲ್ಲಿ ಅದುವೇ ಮೃದುವಾದ ಭಾಗದಲ್ಲಿ ತನ್ನ ಮೂತಿಯಿಂದ ರಂಧ್ರ ಮಾಡಿ ಮೊಟ್ಟೆಗಳನ್ನು ತೂರಿಸಿ ಇಡುತ್ತದೆ. ಬಾಧೆಗೊಳಗಾದ ಕಾಂಡದ ಮೇಲ್ಭಾಗದಲ್ಲಿ ಸಣ್ಣ ಸಣ್ಣ ರಂದ್ರಗಳಿರುತ್ತವೆ. ಇಂತಹ ರಂದ್ರಗಳಿಂದ ಕಂದುಬಣ್ಣದ ರಸ ಮತ್ತು ಪುಡಿ ಮಿಶ್ರಿತವಾಗಿ ಬೀಳುತ್ತಿರುವುದು ಇದರ ಮರಿಹುಳುಗಳ ಚಟುವಟಿಕೆಯನ್ನು ತಿಳಿಸುತ್ತದೆ. ಕೆಲವು ಸಲ ಕಾಂಡದ ಮೇಲೆ ಕಿವಿ ಇಟ್ಟುಕೊಂಡು ಕೇಳಿಸಿಕೊಂಡರೆ ಕರಕರ ಶಬ್ದ ಬರುವುದುಂಟು. ಬಾಧೆ ಅತಿಯಾದಾಗ ಸುಳಿಯ ಭಾಗದ ಗರಿಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಅತಿಯಾದ ಬಾದೆಯಿಂದ ಕಾಂಡ ಮುರಿದು ಬೀಳುತ್ತದೆ. ಸಾಮಾನ್ಯವಾಗಿ ಕಾಂಡ ಭಾಗದಲ್ಲಿ ಗಾಯವಾಗಿರುವುದು, ರೈನೋಸಿರಸ್ ದುಂಬಿಯಿಂದ ಹಾನಿಯಾಗಿರುವುದು, ಸಿಡಿಲಿನಿಂದ ಮರ ಹಾನಿಯಾಗಿರುವುದು, ಹಾಗು ಶಿಲೀಂದ್ರದ ಬಾಧೆಯಿಂದ ಹಾನಿಯಾಗಿರುವುದು ಈ ಪ್ರೌಢ ಕೀಟಗಳಿಗೆ ಆಸ್ಪದ ಮಾಡಿಕೊಡುತ್ತದೆ.

**ನಿಯಂತ್ರಣ ವಿಧಾನಗಳು:** ಮರದ ಕಾಂಡಗಳಿಗೆ ಗಾಯವಾಗುವುದನ್ನು ತಡೆಯಬೇಕು, ಕಾಂಡದ ಮೇಲೆ ಅಲ್ಲಲ್ಲಿ ಆಗಿರುವ ಗಾಯಗಳನ್ನು ಕಾರ್ಬರಿನ್ ಅಥವಾ ಎಂಡೊಸಲ್ಫಾನ್ ಜೊತೆ ಮಣ್ಣು ಮಿಶ್ರ ಮಾಡಿ ಬಳಿಯಬೇಕು. ಎಲೆಕೊಳೆ ರೋಗದಿಂದ ಅಥವಾ ಸುಳಿ ಕೊಳೆ ರೋಗದಿಂದ ಬಳಲುತ್ತಿರುವ ಗಿಡಗಳಿಗೆ ಶಿಲೀಂದ್ರ ನಾಶಕ ಬಳಸಬೇಕು. ಇಲ್ಲದಿದ್ದರೆ ಅಂತಹ ಭಾಗದಿಂದ ಹುಳುಗಳು ಕಾಂಡವನ್ನು ಪ್ರವೇಶ ಮಾಡುತ್ತವೆ. ತೆಂಗಿನ ಗರಿಗಳನ್ನು ಕತ್ತರಿಸುವಾಗ 1 ಮೀ. ನಷ್ಟು ಉದ್ದವನ್ನು ಬಿಟ್ಟು ಕತ್ತರಿಸಬೇಕು. ಬಾಧೆಗೊಳಗಾದ ಕಾಂಡವನ್ನು ಸಂಪೂರ್ಣವಾಗಿ ಛಿದ್ರ ಮಾಡಿ ಅದರೊಳಗಿರುವ ಮರಿಹುಳುಗಳು ಪ್ರೌಢ ಕೀಟ ಹಾಗು ಕೋಶಗಳನ್ನು ನಾಶ ಪಡಿಸಬೇಕು ಅಲ್ಲಲ್ಲಿ ಕೊಳೆಯುತ್ತಿರುವ ತೆಂಗಿನ ಮರದ ದಿಮ್ಮಿಗಳ ಬುಡಭಾಗಗಳನ್ನು ನಾಶ ಪಡಿಸಬೇಕು. ಬಾಧೆಗೊಳಗಾಗದ ತೆಂಗಿನ ಮರದ ಕಾಂಡಕ್ಕೆ ಪ್ರತಿ ಲೀ ನೀರಿಗೆ 3 ಮಿ.ಲೀ. ಎಂಡೋಸಲ್ಫಾನ್ ಅಥವಾ 20 ಗ್ರಾಂ ಕಾರ್ಬರಿಲ್ ಅನ್ನು ಚುಚ್ಚುಮದ್ದು ಅಥವಾ ಲಾಳಿಕೆಯ ಮೂಲಕ ಮೇಲಿನ ರಂದ್ರಭಾಗದಿಂದ ಸುರಿಯಬೇಕು. ಉತ್ತಮ ವಿಧಾನವೆಂದರೆ ಲಿಂಗಾಕರ್ಷಕ ಬಕೆಟ್ ಬಲೆಯನ್ನು ಬಳಸುವುದು ಇದನ್ನು ತೆಂಗಿನ ತೋಟದಿಂದ 1 ಕಿ.ಮೀ ದೂರದಲ್ಲಿ ಇರುವ ಯಾವುದೇ ಇತರೆ ಮರಗಳಿಗೆ 4 ರಿಂದ 5 ಅಡಿ ಎತ್ತರದಲ್ಲಿ ತೂಗುಹಾಕಿ ಅದರಲ್ಲಿ 1 ಲೀ ನೀರು ಡಿಟರ್ಜೆಂಟ್ ಪುಡಿ ಕಬ್ಬಿನ ತುಣುಕುಗಳು ಹುಳಿ ಹೆಂಡ ಈಸ್ಟ್ ಇತ್ಯಾದಿ ಗಳನ್ನು ಹಾಕಿ ಬಕೆಟ್ ತುದಿಯಲ್ಲಿ ಲಿಂಗಾಕರ್ಷಕ ವಸ್ತುವನ್ನು ತೂಗುಬಿಡಬೇಕು. ಆಗಾಗ್ಗೆ ನೀರನ್ನು ಮತ್ತು ಲಿಂಗಾಕರ್ಷಕ ವಸ್ತುವನ್ನು 10 ವಾರಗಳ ಅಂತರದಲ್ಲಿ ಬದಲಾಯಿಸಬೇಕು. ಲಿಂಗಾಕರ್ಷಕ ಬಕೆಟ್ ಬಲೆಗೆ 250 ಗ್ರಾಂ ಹಸಿಯ ತೆಂಗಿನ ಪುಡಿ 500 ಮಿ.ಲಿ ಹುಳಿಯ ಹೆಂಡ ಅಥವಾ ಪೈನಾಪಲ್ ಅಥವಾ ಕಬ್ಬಿನ ಜಲ್ಲೆಯ ಪುಡಿ ಅಥವಾ ಮೊಲ್ಯಾಸಸ್ ಮತ್ತು 10 ಮಿ ಲೀ ಯಾವುದೇ ಕೀಟನಾಶಕವನ್ನು 1 ಲೀ ನೀರಿನಲ್ಲಿ ಮಿಶ್ರ ಮಾಡಬೇಕು

**ಎಲೆ ತಿನ್ನುವ ಕಪ್ಪು ತಲೆ ಹುಳು(ಒಪಿಸಿನಾ ಅರೆನೋಸೆಲ್ಲಾ): ಹಾನಿಯ ಚಿಹ್ನೆಗಳು** : ಮರಿಹುಳುಗಳು ಗರಿಗಳ ತಳಭಾಗದಲ್ಲಿ ದಟ್ಟವಾದ ಬಲೆಯನ್ನು (ಗ್ಯಾಲರಿ) ಮಾಡಿಕೊಂಡು ಗರಿಯ ಹಸಿರುಭಾಗವನ್ನು ಕೆರೆದು ತಿನ್ನುತ್ತವೆ. ಈ ರೀತಿ ಕೆರೆದು ತಿನ್ನುವುದರಿಂದ ಗರಿಗಳ ಮೇಲೆ ಒಣ ಹುಲ್ಲಿನ ಬಣ್ಣದ ಮಚ್ಚೆಗಳಾಗುತ್ತವೆ . ಕ್ರಮೇಣ ಈ ಮಚ್ಚೆಗಳು ಹರಡಿ ಇಡೀ ಗರಿಗಳೆಲ್ಲಾ ಒಣಗುತ್ತವೆ ಹುಳುವಿ ಹಾವಳಿ ಕೆಳಗಿನ ಗರಿಗಳಲ್ಲಿ ಪ್ರಾರಂಬವಾಗಿ ಕ್ರಮೇಣ ಮೇಲಿನ ಗರಿಗಳಿಗೆ ಹರಡುತ್ತದೆ. ಈ ಕೀಟದ ಹಾವಳಿಯು ಜನವರಿ ಮಾಹೆಯಿಂದ ಮೇ ಮಾಹೆಯ ವರೆಗೆ ಅಧಿಕವಾಗಿರುತ್ತದೆ. ಮಳೆಗಾಲದಲ್ಲಿ ಮಳೆ ಬಂದಾಗ ಈ ಹುಳುವಿನ ಗ್ಯಾಲರಿಗಳು ನೆನೆದು ಮೊಟ್ಟೆ ಮರಿಹುಳುಗಳು ಸಾಯುತ್ತವೆ. ಈ ಸಂದರ್ಭದಲ್ಲಿ ಪರೋಪ ಜೀವಿಗಳು ವೃದ್ಧಿ ಯಾಗಿ ಕೀಟಗಳ ಪ್ರಮಾಣ ಕಡಿಮೆ ಇರುತ್ತದೆ ಆದರೆ ಪೂರ್ಣ ಹತೋಟಿಯಲ್ಲಿರುವುದಿಲ್ಲ. ನಂತರ ಸೆಪ್ಟೆಂಬರ್ ಅಕ್ಟೋಬರ್ ಮಾಹೆಯಲ್ಲಿ ಕೀಟದ ಹಾವಳಿಯು ಮುಂದುವರೆಯುತ್ತದೆ.

**ಸಮಗ್ರ ನಿರ್ವಹಣೆ ಕ್ರಮುಗಳು**

**ಯಾಂತ್ರಿಕ ವಿಧಾನ:** ತೋಟಗಳಲ್ಲಿ ಬಿದ್ದ ಗರಿಗಳು, ಇತರೆ ಕಸ ಕಡ್ಡಿಗಳನ್ನು ಸಂಗ್ರಹಿಸಿ ಸ್ವಚ್ಚವಾಗಿಡುವುದು ಕೀಟದ ಆಕ್ರಮಣದ ಸೂಚನೆ ಕಂಡ ಕೂಡಲೆ ಗ್ಯಾಲರಿ ಇರುವ ಗರಿ ಅಥವಾ ಅದರ ಭಾಗಗಳನ್ನು ಮಾತ್ರ ಕತ್ತರಿಸಿ ಸುಡಬೇಕು.

**ಜೈವಿಕ ವಿಧಾನ:** ಕೀಟದ ಬಾಧೆಯು ಕೆಳಭಾಗದ ಗರಿಗಳಲ್ಲೆ ಇದ್ದು ತೀವ್ರ ಹಂತ ತಲುಪಿಲ್ಲದಿದ್ದಲ್ಲಿ ಪ್ರಯೋಗಶಾಲೆಗಳಿಂದ ಪರೋಪ ಜೀವಿಗಳಾದ ಗೋನಿಯೋಜಸ್ ನೆಫಾಂಟಿಡಿಸ್ , ಬ್ರಾಕಿಮೇರಿಯಾ, ಟ್ರೈಕೋಸ್ಪಿಲ್ಲಸ್ ಪರೋಪಜೀವಿಗಳನ್ನು ಬಿಡುಗಡೆ ಮಾಡಬೇಕು.

**ರಾಸಾಯನಿಕ ವಿಧಾನ:** ಕೀಟದ ಬಾಧೆಯು ತೀವ್ರತೆಯ ಹಂತ ತಲುಪಿ ಯಾಂತ್ರಿಕ ಹಾಗು ಜೈವಿಕ ವಿಧಾನಗಳಿಂದ ಹತೋಟಿ ಬಾರದಿದ್ದಾಗ ಮಾನೋಕ್ರೋಟೊಫಾಸ್ ಕೀಟನಾಶಕವನ್ನು 10 ಲೀ ನೀರಿಗೆ 15 ಮಿ ಲಿ ಯಂತೆ ಬೆರೆಸಿ ಸಣ್ಣ ಮರಗಳಿಗೆ ಗರಿಗಳ ಕೆಳಭಾಗಕ್ಕೆ ಸಂಪೂರ್ಣವಾಗಿ ಒದ್ದೆಯಾಗುವಂತೆ ಸಿಂಪಡಿಸಬೇಕು.

**ಬೇರಿನ ಮೂಲಕ ಉಪಚಾರ :** ಮರಗಳು 7 ರಿಂದ 8 ವರ್ಷಗಳಿಗೆ ಮೇಲ್ಪಟ್ಟಲ್ಲಿ ಕೀಟನಾಶಕವನ್ನು ಬೇರಿನ ಮೂಲಕ ಉಣಿಸಬೇಕಾಗುತ್ತದೆ ಕಿರುಬೆರಳು ಗಾತ್ರದ ಕೆಂಪಗಿನ ಬೇರನ್ನು ಆಯ್ಕೆ ಮಾಡಿ ಓರೆಯಾಗಿ ಕತ್ತರಿಸಿ ಸಿದ್ದಪಡಿಸಿಕೊಳ್ಳಬೇಕು 1.5 ಇಂಚು ಅಗಲ ಮತ್ತು 6 ಇಂಚು ಉದ್ದದ ಪಾಲಿಥಿನ್ ಚೀಲದಲ್ಲಿ ಶೇ 5 ರ ಅಜಾಡಿರ್ಯಾಕ್ಟಿನ್ 7.5 ಮಿ ಲೀ ಅಥವಾ 10 ಮಿ ಲೀ ಮಾನೋಕ್ರೊಟೋಪಾಸ್ ಕೀಟನಾಶಕವನ್ನು ತೆಗೆದುಕೊಂಡು ಸಮಪ್ರಮಾಣದಲ್ಲಿ ನೀರು ಬೆರೆಸಿ ಬೇರನ್ನು ಈ ಔಷದಿ ಒಳಗೆ ಮುಳುಗುವಂತೆ ಇರಿಸಿ ಪಾಲಿಥಿನ್ ಚೀಲವನ್ನು ಕಟ್ಟಬೇಕು.

**ಎಚ್ಚರಿಕೆ:** ಬೇರಿನ ಮೂಲಕ ಮಾನೋಕ್ರೊಟೋಫಾಸ್ ಕೀಟನಾಶಕವನ್ನು ಉಪಚರಿಸಿದ ಮರಗಳಿಂದ 45 ದಿನಗಳ ವರೆಗೆ ಕಾಯಿಗಳೂ ಹಾಗು ಎಳನೀರುಗಳನ್ನು ಕೀಳಬಾರದು ಹಾಗು ಬಳಸಬಾರದು.

**ತೆಂಗಿನಲ್ಲಿ ಬರುವ ಪ್ರಮುಖ ರೋಗಗಳು ಹಾಗೂ ಅವುಗಳ ಹತೋಟಿ ಕ್ರಮಗಳು**

1. ಅಣಬೆ ರೋಗ: ಗ್ಯಾನೋಡರ್ಮ ಲುಸಿಡಮ್ ಎಂಬ ಶಿಲೀಂಧ್ರದಿಂದ ಬರುವ ಈ ರೋಗವು ಸಾಮಾನ್ಯವಾಗಿ ಮರದಿಂದ ಮರಕ್ಕೆ, ಮಣ್ಣು ಮತ್ತು ನೀರಿನ ಮುಖಾಂತರ ಹರಡುತ್ತದೆ.

**ರೋಗದ ಲಕ್ಷಣಗಳು::** ಕಾಂಡದ ಕೆಳಭಾಗದಲ್ಲಿ ಅಂದರೆ ನೆಲಮಟ್ಟದಿಂದ ಒಂದುವರೆ ಅಡಿ ಎತ್ತರದಲ್ಲಿ (ಗರಿಷ್ಠ 3 ಅಡಿ)ಕಂದು ಬಣ್ಣದ ಅಂಟು ದ್ರವವು ಸೋರುತ್ತದೆ. ಮರದ ಕೆಳಭಾಗದ ಗರಿಗಳು ಮೊದಲು ಹಳದಿ ಬಣ್ಣಕ್ಕೆ ತಿರುಗಿ ನಂತರ ಒಂದೊಂದಾಗಿ ಜೋತು ಬಿದ್ದು ಕೆಲವು ತಿಂಗಳುಗಳ ಕಾಲ ಮರಕ್ಕೆ ಅಂಟಿಕೊಂಡಿರುತ್ತವೆ. ಸೊರಗಿದ ಎಲೆಗಳು ಕಂದು ಬಣ್ಣಕ್ಕೆ ತಿರುಗುವುದು, ಚಿಗುರು ಎಲೆಗಳು ಸುಕ್ಕುಗಟ್ಟುವುದು. ರೋಗದ ತೀವ್ರತೆಯಿಂದ ಬಳಲುತ್ತಿರುವ ಮರಗಳ ಕಾಯಿಗಳ ಗಾತ್ರ ಮತ್ತು ಗುಣಮಟ್ಟ ಕಡಿಮೆಯಿರುತ್ತದೆ.ಸೋಂಕು ಮುಂದುವರೆದಂತೆ ಗರಿಗಳ ಗಾತ್ರ ಕಿರಿದಾಗಿ ಹಳದಿ ಬಣ್ಣಕೆ ತಿರುಗಿ ಅಂತಿಮವಾಗಿ ಮರ ಸತ್ತು ಹೋಗುತ್ತದೆ. ಕೆಲವು ಬಾರಿ ಮರದ ಬುಡದಲ್ಲಿ ಅಣಬೆಗಳು ಕಂಡು ಬರುತ್ತವೆ. ಈ ಅಣಬೆಗಳು ಬಟ್ಟಲಿನಾಕೃತಿಲ್ಲಿದ್ದು ಮೊದಲು ವರ್ಣಮಯವಾಗಿ ಕ್ರಮೇಣ ಕೆತ್ತಲೆ ಬಣ್ಣಕ್ಕೆ ತಿರುಗುತ್ತವೆ.

ಹತೋಟಿ: ಗಿಡದ ಸುತ್ತಲು 60cm ಆಳ 30 cm ಅಗಲದ ಕಾಲುವೆಗಳನ್ನು ತೋಡಿ, ರೋಗ ಪೀಡಿತ ಮರದ ಬೇರುಗಳನ್ನು ಆರೋಗ್ಯಶಾಲಿ ಮರದ ಬೇರುಗಳಿಂದ ಬೇರ್ಪಡಿಸಿ ರೋಗ ಹರಡದಂತೆ ತಡೆಯಬೇಕು. ರೋಗದ ಪೀಡಿತ ಮರದ ಮೂಲಕ ಆರೋಗ್ಯಶಾಲಿ ಮರಕ್ಕೆ ನೀರು ಹರಿಸಬಾರದು. ಹನಿ ನೀರಾವರಿ ಅಥವಾ ಬೇಸಿನ್ ನೀರಾವರಿ ಪದ್ಧತಿಯನ್ನು ಅನುಸರಿಸಬೇಕು. ಶಿಫಾರಸ್ಸು ಮಾಡಿರುವ ರಸಗೊಬ್ಬರಗಳ ಜೊತೆಗೆ ಪ್ರತಿ ಮರಕ್ಕೆ 50 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರವನ್ನು ನೀಡಬೇಕು. ಅಣಬೆ ರೋಗಕ್ಕೆ ತುತ್ತಾದ ಮರಗಳಿಗೆ 3 ಮಿ.ಲೀ ಹೆಕ್ಸಾಕೋನಜೋಲ್‌ನ್ನು 100 ಮಿ.ಲೀ. ನೀರಿನಲ್ಲಿ ಬೆರಸಿ ಮೂರು ತಿಂಗಳಿಗೊಮ್ಮೆ ಬೇರಿನ ಮೂಲಕ ಕೊಡಬೇಕು. ಬೇವಿನ ಹಿಂಡಿ(ವರ್ಷಕ್ಕೆ ಪ್ರತಿ ಗಿಡಕ್ಕೆ 5 ಕಿ.ಗ್ರಾಂ) ಮತ್ತು 125 ಗ್ರಾಂ ಟ್ರೈಕೋಡರ್ಮ ವಿರಿಡೆ ಜೈವಿಕ ಪುಡಿಯನ್ನು 10 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರದಲ್ಲಿ ಬೆರೆಸಿ(ಪ್ರತಿ ಮರಕ್ಕೆ ಆರು ತಿಂಗಳಿಗೊಮ್ಮೆ) ಮರದ ಸುತ್ತಲು ಅಗೆದು ಮಣ್ಣಿಗೆ ಹಾಕ ಬೇಕು. ರೋಗ ರಹಿತ ಮಣ್ಣಿನಲ್ಲಿ ಬೆಳೆದ ತೆಂಗಿನ ಸಸಿಗಳನ್ನು ಬಳಸ ಬೇಕು ಹಾಗೂ ಬೇಸಾಯ ಮಾಡುವಾಗ ತೆಂಗಿನ ಮರಗಳ ಕಾಂಡ ಅಥವಾ ಬೇರುಗಳಿಗೆ ಹಾನಿಯಾಗದಂತೆ ಎಚ್ಚರವಹಿಸಬೇಕು.

2. ಕಾಂಡ ಸೋರುವ ರೋಗ/ ರಕ್ತಕಾರುವ ರೋಗ: ಈ ರೋಗವು ಥೆಲ್ವಿಯಾಪ್ಸಿಸ್ ಪ್ಯಾರಾಡಾಕ್ಸಾಎಂಬ ಶಿಲೀಂಧ್ರದಿಂದ ಬರುತ್ತದೆ

ರೋಗದ ಲಕ್ಷಣಗಳು: ಈ ರೋಗವು ಕಾಂಡದ ಯಾವುದೇ ಭಾಗದಲ್ಲಾದರೂ (ಸಾಮಾನ್ಯವಾಗಿ ಕಾಂಡದ ಮೇಲೆ 3 ರಿಂದ 6 ಅಡಿ ಎತ್ತರದವರೆಗೆ ) ಉಂಟಾಗಬಹುದಾದ ಬಿರುಕುಗಳಿಂದ ಕೆಂಪು ಮಿಶ್ರಿತ ದ್ರವ ಸುರಿಯುವುದು ಹಾಗೂ ಹೊರಬಂದ ದ್ರವ ತೆಂಗಿನ ಮರದ ತೊಗಟೆಯ ಮೇಲೆ ಒಣಗಿದ ನಂತರ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ದ್ರವ ಸುರಿಯುತ್ತಿರುವ ತಳ ಭಾಗದಲ್ಲಿ ಕಾಂಡ ಕೊಳೆತಿರುತ್ತದೆ. ಪ್ರಾರಂಭದ ಹಂತದಲ್ಲಿ ಕಾಂಡದ ಒಳಗಡಯೇ ಕೊಳೆಯುವಿಕೆಯು ಕೇಂದ್ರೀಕರಿಸುತ್ತದೆ.ಆದರೆ ರೋಗದ ತೀವ್ರತೆ ಹೆಚ್ಚಿದಂತೆ ಕೊಳೆತ ಭಾಗಗಳು ಕೂಡಿಕೊಂಡು ರೋಗ ಉಲ್ಬಣಗೊಳ್ಳುತ್ತದೆ. ಗರಿಗಳ ಗಾತ್ರ ಕುಗ್ಗಿ ತುದಿಯಲ್ಲಿ ಕಾಂಡದ ಗಾತ್ರ ಕುಗ್ಗುವುದಲ್ಲದೆ ಇಳುವರಿಯು ಗಣನೀಯವಾಗಿ ಕಡಿಮೆಯಾಗುತ್ತದೆ.

ಹತೋಟಿ: ಮಧ್ಯಂತರ ಬೇಸಾಯ ಮಾಡುವಾಗ ಮರಗಳಿಗೆ ಗಾಯಗಳಾಗದಂತೆ ಎಚ್ಚರಿಕೆ ವಹಿಸಬೇಕು. ಪ್ರತಿ ಮರಕ್ಕೆ ಶಿಫಾರಸ್ಸು ಮಾಡಿರುವ ರಸಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರದ ಜೊತೆಗೆ 5 ಕಿ.ಗ್ರಾಂ. ಬೇವಿನ ಹಿಂಡಿಯನ್ನು ಕೊಡಬೇಕು. ಮರದ ಸುತ್ತಲೂ ನೀರು ನಿಲ್ಲದ ಹಾಗೆ ಬಸಿ ಕಾಲುವೆಗಳನ್ನು ತೆಗೆಯುವುದು ಮತ್ತು ಒಣ ಪ್ರದೇಶದಲ್ಲಿ ತೇವಾಂಶ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಹಸಿರೆಲೆ ಗೊಬ್ಬರದ ಗಿಡಗಳನ್ನು ಮರದ ಸುತ್ತ ಬೆಳೆಸಿ, 40–45 ದಿನಗಳ ನಂತರ ಮಣ್ಣಿನಲ್ಲಿ ಬೆರಸಬೇಕು. ರಸ ಸೋರುತ್ತಿರುವ (ತೊಗಟೆ) ಭಾಗವನ್ನು ಕೆತ್ತಿ ಶೇ 10ರ ಬೋರ್ಡೊ ಮುಲಾಮನ್ನು ಅಥವಾ ಶೇ 5 ರ ಹೆಕ್ಸಾಕೋನಜೋಲ್ ದ್ರಾವಣವನ್ನು ಲೇಪಿಸಬೇಕು

3. ಸುಳಿಕೊಳೆ ರೋಗ: ಈ ರೋಗವು ಪೈಟಾಪ್ತರಾ ಪಾಮಿವೋರ ಎಂಬ ಶಿಲೀಂಧ್ರದಿಂದ ಬರುತ್ತದೆ ಹಾಗೂ ಸಾಮಾನ್ಯವಾಗಿ ಜುಲೈ ತಿಂಗಳಿನಿಂದ ಡಿಸೆಂಬರ್ ವರೆಗೆ ಅಧಿಕವಾಗಿರುತ್ತದೆ.

**ರೋಗದ ಲಕ್ಷಣಗಳು**: ಆಗ ತಾನೇ ತೆರದಿರುವ ಸುಳಿಎಲೆಗಳು ಮಾಸಲು ಹಳದಿ ಬಣ್ಣಕ್ಕೆ ತಿರುಗಿ ನಂತರ ಕಂದು ಬಣ್ಣಕ್ಕೆ ತಿರುಗುತ್ತವೆ. ಈ ರೀತಿ ಚಿಹ್ನೆ ಕಾಣಿಸಿಕೊಂಡ ಮರದ ಸುಳಿಯನ್ನು ಮೇಲೆತ್ತಿ ಸುಳಿಯನ್ನು ಪರೀಕ್ಷಿಸಿದರೆ ಕೊಳೆತ ಸುಳಿಯಿಂದ ಕೆಟ್ಟ ವಾಸನೆ ಹೊರ ಸೂಸುತ್ತಿರುತ್ತದೆ ಮತ್ತು ಇಂತಹ ಗರಿಗಳನ್ನು ಹೊರಗೆ ಎಳೆದಾಗ ಅದು ಸುಲಭವಾಗಿ ಹೊರಬರುವುದು.

ಹತೋಟಿ: ರೋಗದ ಪ್ರಾರಂಭಿಕ ಹಂತದಲ್ಲೇ ನಿಯಂತ್ರಣ ಮಾಡಬೇಕು. ಮಧ್ಯದ ಎಳೆಯ ಸುಳಿ ಒಣಗಲು ಪ್ರಾರಂಭಿಸಿದಾಗ, ಸುಳಿಯಲ್ಲಿನ ರೋಗ ಪೀಡಿತ ಭಾಗವನ್ನು ತೆಗೆದು ಸ್ವಚ್ಚ ಮಾಡಿ ಶೇ. 1 ರ ಬೋರ್ಡೊ ದ್ರಾವಣವನ್ನು ಸುರಿಯ ಬೇಕು. ತೀವ್ರವಾಗಿ ರೋಗ ತಗುಲಿದ ತೆಂಗಿನ ಮರಗಳನ್ನು ಕತ್ತರಿಸಿ ಹಾಕಿ ಸುಡಬೇಕು ಮತ್ತು ಅಕ್ಕ ಪಕ್ಕದ ಮರಗಳಿಗೆ ಮುನ್ನೆಚ್ಚರಿಕೆಯಾಗಿ ಶೇ. 1 ರ ಬೋರ್ಡೊ ದ್ರಾವಣವನ್ನು ಸಿಂಪಡಿಸಬೇಕು. ಮುಂಜಾಗ್ರತಾ ಕ್ರಮವಾಗಿ ರೋಗ ಹರಡದಂತೆ ಶೇ. 1 ರ ಬೋರ್ಡೊ ದ್ರಾವಣವನ್ನು ಮಳೆಗಾಲ ಪ್ರಾರಂಭವಾಗುವ ಮೊದಲು ಸಿಂಪರಣೆ ಮಾಡಬೇಕು.

4. ಎಲೆ ಚುಕ್ಕೆ ರೋಗ: ಈ ರೋಗವು ಪೆಸ್ಟಲೋಶಿಯಾಪ್ಸಿಸ್ ಪಾಮಿವೊರಮ್ ಎಂಬ ಶಿಲೀಂಧ್ರದಿಂದ ಬರುತ್ತದೆ.

ರೋಗದ ಲಕ್ಷಣಗಳು: ಎಲೆಗಳ ಮೇಲೆ ಸಣ್ಣ ಸಣ್ಣ ಕಂದು ಅಥವಾ ಬೂದು ಬಣ್ಣದ ಚುಕ್ಕೆಗಳು ಪ್ರಾರಂಭಿಕ ಹಂತದಲ್ಲಿ ಕಾಣಿಸಿಕೊಳ್ಳುತ್ತವೆ. ಕ್ರಮೇಣ ಚುಕ್ಕೆಗಳ ಗಾತ್ರವು ಹೆಚ್ಚಾದಂತೆ ಚುಕ್ಕೆಗಳ ಮಧ್ಯಭಾಗವು ಬೂದಿಬಣ್ಣಕ್ಕೆ ತಿರುಗುವುದು ಮತ್ತು ಸುತ್ತಲಿನ ಭಾಗವು ಕಂದು ಬಣ್ಣಕ್ಕೆ ತಿರುಗುತ್ತದೆ. ಚುಕ್ಕೆಗಳು ವಿಸ್ತಾರಗೊಂಡು ಒಂದನ್ನೊಂದು ಕೂಡಿಕೊಂಡು ಆಕಾರ ರಹಿತ ಮಚ್ಚೆಗಳಾಗುತ್ತವೆ. ರೋಗ ಮುಂದುವರೆದಂತೆ ಗರಿಗಳ ತುದಿ ಮತ್ತು ಅಂಚುಗಳು ಒಣಗಿ ಗರಿಯೇ ಮುರುಟಿಕೊಳ್ಳುತ್ತವೆ.

ಹತೋಟಿ: ಎಲೆ ಚುಕ್ಕೆ ರೋಗದ ಬಾಧೆಯನ್ನು ತಡೆಯಲು 2.5 ಗ್ರಾಂ ಮ್ಯಾಂಕೋಜೆಬ್ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಶಿಲೀಂಧ್ರನಾಶಕವನ್ನು 1 ಲೀಟರ್ ನೀರಿನಲ್ಲಿ ಕರಗಿಸಿ ಎಲೆಗಳ ಮೇಲೆ ಸಿಂಪರಣೆ ಮಾಡಬೇಕು.